ದಿನಾಂಕ 13.11.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಮೃತ 4ನೇ ವಾದಿಯ ವಾರಸುದಾರರ ಪರ ಶ್ರೀ ಎಸ್.ಎನ್., ವಕೀಲರಿಂದಃ-

ನಾನು ಎಸ್.ಎಸ್.ಎಲ್.ಸಿ.,ವರೆಗೆ ಕಲಿತಿದ್ದೇನೆ. ವಾದಿಗಳು ನನಗೆ ಗೊತ್ತು. ವಾದಿಗಳು ಜಮೀನಿನಲ್ಲಿ ಭಾಗ ಬರಬೇಕೆಂದು ಈ ದಾವೆ ಸಲ್ಲಿಸಿದ್ದಾರೆ. ದಾವಾ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಸಾಕ್ಷಿ ಸ್ವಇಚ್ಛೆಯಿಂದ ನನ್ನ ತಂದೆ ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ಪಿತ್ರಾರ್ಜಿತ ಆಸ್ತಿಯಾದ ಕಾರಣ ದಿನಾಂಕ 28.03.1959 ರಲ್ಲಿ ಚಿಕ್ಕಪುಟ್ಟಯರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು 1959 ರಲ್ಲಿ ಜೋಗಯ್ಯ ಮತ್ತು ಸಿದ್ದಯ್ಯ ಚಿಕ್ಕಪುಟ್ಟಯ್ಯ ಮತ್ತು ಸಂಜೀವಯ್ಯರವರಿಗೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದೊಡ್ಡಪುಟ್ಟಯ್ಯ ನನ್ನ ತಾತ. ನಿಡಿ-1 ಕ್ರಯಪತ್ರದಲ್ಲಿ ದೊಡ್ಡಪುಟ್ಟಯ್ಯನ ಮಕ್ಕಳು ಸಿದ್ದಯ್ಯ ಮತ್ತು ಜೋಗಯ್ಯ ಎಂದು ಇದೆ ಎಂದರೆ ಸರಿ. ಸಿದ್ದಯ್ಯ ನಿಮ್ಮ ತಂದೆ ಎಂದರೆ ಸಾಕ್ಷಿಯು ಗುರುಸಿದ್ದಯ್ಯ ಎಂದು ನುಡಿಯುತ್ತಾರೆ. ನನ್ನ ತಂದೆಯನ್ನು ಸಿದ್ದಯ್ಯ ಮತ್ತು ಗುರುಸಿದ್ದಯ್ಯ ಎಂಬ ಎರಡೂ ಹೆಸರುಗಳಿಂದಲೂ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ನಿಮ್ಮ ತಂದೆಯ ಸ್ವಯಾರ್ಜಿತ ಸ್ವತ್ತಾದ ಕಾರಣ ನಿಡಿ-1 ರಂತೆ ಮೈನರ್ ಮಕ್ಕಳ ಪರವಾಗಿ, ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

2. ನನ್ನ ತಂದೆ ಪಿ.ಡಬ್ಲ್ಯೂ.ಡಿ ಕಂಟ್ರಾಕ್ಟರ್ ಆಗಿದ್ದರು. ಈ ಬಗ್ಗೆ

ದಾಖಲೆ ಹಾಜರುಪಡಿಸಬಲ್ಲೆ. ಮೃತ 4 ನೇ ವಾದಿ ವಿಷಕಂಠಯ್ಯ ಮರದ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ನ್ನು ನಿಮ್ಮ ತಂದೆ ಮಾರಾಟ ಮಾಡಿದ ನಂತರ ವಿಷಕಂಠಯ್ಯ ಮತ್ತು ನಿಂಗಪ್ಪ ಅದೇ ಆಸ್ತಿಯನ್ನು ಖರೀದಿ ಮಾಡಿದರು ಎಂದರೆ ಸಾಕ್ಷಿಯು ಕ್ರಯಪತ್ರದಲ್ಲಿ ಆ ರೀತಿ ಇದೆಯಾ ಎಂದು ನುಡಿಯುತ್ತಾರೆ.

3. ದಾವಾ ಐಟಂ ನಂ.2 ನ್ನು ಗುರುಸಿದ್ದಯ್ಯರವರು ಒಟ್ಟು ಕುಟುಂಬದ ಪರವಾಗಿ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. 1959 ಮತ್ತು 1963 ರಲ್ಲಿ ಎಲ್ಲರ ಹೆಸರಿಗೂ ಕ್ರಯಪತ್ರ ನೋಂದಣಿ ಆಗುತ್ತಿರಲಿಲ್ಲ, ಒಬ್ಬರ ಹೆಸರಿಗೆ ಮಾತ್ರ ಎಂದರೆ ಸಾಕ್ಷಿಯು ಸ್ವಯಾರ್ಜಿತ ಆಸ್ತಿಯಾಗಿರುವುದರಿಂದಲೇ ಗುರುಸಿದ್ದಯ್ಯರವರ ಹೆಸರಿಗೆ ಕ್ರಯಪತ್ರ ನೋಂದಣಿಯಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಅದು ನಿಮ್ಮ ತಾಯಿಯ ಹೆಬ್ಬೆಟ್ಟಿನ ಗುರುತು ಎಂದರೆ ಸಾಕ್ಷಿಯು ಅಲ್ಲ ಎಂದು ನುಡಿಯುತ್ತಾರೆ.

4. ದಿನಾಂಕ 16.07.2011 ರಂದು ಕಾಳಮ್ಮ, ನಿಂಗಪ್ಪ ಮತ್ತು ವಿಷಕಂಠಯ್ಯರವರು ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಿಭಾಗ ಪತ್ರದಂತೆ ಸರ್ವೇ ನಂ.44/8 ರಲ್ಲಿ 4 ಗುಂಟೆ ಕಾಳಮ್ಮನಿಗೆ, 2 ಗುಂಟೆ ವಿಷಕಂಠಯ್ಯನಿಗೆ ಎಂದು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಆಸ್ತಿಯನ್ನು ಹೇಗೆ ಮಾಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ವಿಭಾಗ ಪತ್ರದಂತೆ ಕಾಳಮ್ಮ 4 ಗುಂಟೆಯಲ್ಲಿ, ವಿಷಕಂಠಯ್ಯ 2 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದಾರೆ

ಎಂದರೆ ಸಾಕ್ಷಿಯು ಕಾಳಮ್ಮ ವಾಸಿಸಲು ಮನೆ ಇಲ್ಲ ಎಂದು ನನ್ನ ತಾಯಿಯನ್ನು ಕೇಳಿಕೊಂಡಿದ್ದಕ್ಕೆ ಅವರ ಕೋರಿಕೆಯಂತೆ 1 ಗುಂಟೆಯಲ್ಲಿ ಕಾಳಮ್ಮ ಮನೆ ಕಟ್ಟಿಕೊಂಡಿದ್ದಾರೆ, ನಾವು ಯಾವುದೇ ಪತ್ರ ಮಾಡಿಕೊಟ್ಟಿಲ್ಲ ಮನೆ ಮಾತ್ರ ಕಟ್ಟಿಕೊಳ್ಳಿ ಎಂದು ಹೇಳಿದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ ಮನೆ ಕಟ್ಟಲು ಜಾಗ ಬಿಟ್ಟುಕೊಟ್ಟದ್ದಕ್ಕೆ ಪಂಚಾಯಿತಿ ಪಾರಿಕತ್ ಮಾಡಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು. ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.